# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮರಿತಿಬ್ಬೇಗೌಡ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2832

ಉತ್ತರಿಸಬೇಕಾದ ದಿನಾಂಕ : 29-03-2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
| --- | --- | --- |
| (ಅ) | 2018-19 ನೇ ಸಾಲಿನಲ್ಲಿ ಸಮ್ಮಿಶ್ರ ಸರ್ಕಾರದಲ್ಲಿ ಸಹಕಾರ ಸಂಘಗಳಿಂದ ಪಡೆದ ಸಾಲದಲ್ಲಿ ರೂ.1.00 ಲಕ್ಷಗಳವರೆಗೆ ಸಾಲ ಮನ್ನಾ ಮಾಡಲಾಗಿದೆಯೇ; | ಹೌದು,<br>ರಾಜ್ಯದ ರೈತರು ಸಹಕಾರ ಸಂಘಗಳಲ್ಲಿ ಅಲ್ಪಾವಧಿ ಬೆಳೆ ಸಾಲದ ಪಡೆದು ದಿನಾಂಕ: 10.07.2018 ಕ್ಕೆ ಹೊರಬಾಕಿ ಹೊಂದಿರುವ ಮೊತ್ತದಲ್ಲಿ ಒಂದು ಕುಟುಂಬಕ್ಕೆ ಗರಿಷ್ಠ ರೂ.1.00 ಲಕ್ಷಗಳ ಸಾಲ ಮನ್ನಾ ಮಾಡಲು ಸರ್ಕಾರದಿಂದ ದಿ.14.08.2018 ರಂದು ಆದೇಶವಾಗಿರುತ್ತದೆ. |
| (ಆ) | ಸದರಿ ಫಲಾನುಭವಿಗಳನ್ನು ಗುರುತಿಸುವಲ್ಲಿ ಇರುವ ಮಾನದಂಡಗಳೇನು? (ವಿವರ ನೀಡುವುದು) | ಸಹಕಾರ ಸಂಘಗಳ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿನ ಫಲಾನುಭವಿಗಳನ್ನು ಗುರುತಿಸಲು ಮಾನದಂಡಗಳು ಈ ಕೆಳಗಿನಂತಿರುತ್ತವೆ.<br>1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಡಿಸಿಸಿ ಬ್ಯಾಂಕುಗಳು, ಪಿಕಾರ್ಡ್ ಬ್ಯಾಂಕುಗಳು ಹಾಗೂ ಲ್ಯಾಂಪ್ಸ್ ಗಳಲ್ಲಿ ರೈತರು ದಿ:10.07.2018ಕ್ಕೆ ಬೆಳೆ ಸಾಲ ಹೊರಬಾಕಿ ಹೊಂದಿರಬೇಕು.<br>2. ಬೆಳೆ ಸಾಲದಲ್ಲಿ ಒಂದು ಕುಟುಂಬಕ್ಕೆ ಗರಿಷ್ಟ ರೂ.1.00 ಲಕ್ಷದವರೆವಿಗೆ ಮನ್ನಾ ಆಗುತ್ತದೆ.<br>3. ಈ ಯೋಜನೆ ರೂ.20,000 ಹೆಚ್ಚಿನ ವೇತನ/ಪಿಂಚಣಿ ಪಡೆಯುವ ಸರ್ಕಾರಿ, ಸಹಕಾರ ಮತ್ತು ಇತರೇ ಕ್ಷೇತ್ರದ ನೌಕರರು, ಕಳೆದ ಮೂರು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ಆದಾಯ ತೆರಿಗೆ ಪಾವತಿದಾರರಿಗೆ ಅನ್ವಯವಾಗುವುದಿಲ್ಲ.<br>4. ದಿ.10-7-2018 ಕ್ಕೆ ಹೊರಬಾಕಿ ಚಾಲ್ತಿ ಇದ್ದಲ್ಲಿ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ಗಡುವಿನ ದಿನಾಂಕದೊಳಗೆ ಮರುಪಾವತಿಸತಕ್ಕದ್ದು.<br>5. ಬೆಳೆ ಸಾಲದ ಹೊರಬಾಕಿ ಸುಸ್ತಿ ಇದ್ದಲ್ಲಿ ಮರುಪಾವತಿ ದಿನಾಂಕದವರೆಗಿನ ಸಂಪೂರ್ಣ ಬಡ್ಡಿಯನ್ನು ಹಾಗೂ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ದಿನಾಂಕ: 31.07.2019 ರೊಳಗೆ ಪಾವತಿಸತಕ್ಕದ್ದು.<br>6. ಎರಡು ಸಹಕಾರ ಸಂಘಗಳಲ್ಲಿ ಸಾಲ ಪಡೆದಿದ್ದಲ್ಲಿ ಒಂದು ಸಹಕಾರ ಸಂಘದಲ್ಲಿ ಮಾತ್ರ ಸಾಲ ಮನ್ನಾ ದೊರೆಯುವುದು. |

<table>
<tr><td>(ಇ)</td><td>ಇದರಲ್ಲಿ ಷರತ್ತುಗಳನ್ನು ಪೂರೈಸಿದವರ ಸಂಖ್ಯೆ ಷರತ್ತುಗಳನ್ನು ಪೂರೈಸದಿರುವವರ ಸಂಖ್ಯೆ ಹಾಗೂ ಸಹಕಾರ ಸಂಘಗಳಿಂದ ಸಾಲ ಮನ್ನಾ ಮಾಡಲಾದ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಸಹಕಾರ ಸಂಘಗಳ ಸಾಲ ಮನ್ನಾ ತಂತ್ರಾಂಶದಲ್ಲಿ ಸಹಕಾರ ಸಂಘಗಳು ಮಾಹಿತಿ ಅಳವಡಿಸಿದ ರೈತರ ಪೈಕಿ ಇದುವರೆಗೆ 17,37,052 ರೈತರ ಅರ್ಹತೆಯನ್ನು ಗುರುತಿಸಿ ಈ ಪೈಕಿ 17,06,049 ರೈತರ ಉಳಿತಾಯ ಖಾತೆಗಳಿಗೆ ಸಾಲ ಮನ್ನಾ ಮೊತ್ತ ಬಿಡುಗಡೆ ಮಾಡಲಾಗಿದೆ. ಉಳಿದ 13,334 ರೈತರ ಅರ್ಹತೆ ಗುರುತಿಸಲು ಬಾಕಿ ಇದ್ದು, ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>(ಈ)</td><td>ಬಾಕಿ ಇರುವ ಫಲಾನುಭವಿಗಳಿಗೆ ಯಾವ ಕಾಲಮಿತಿಯಲ್ಲಿ ಸಾಲ ಮನ್ನಾ ಮಾಡಲಾಗುವುದು;</td><td>ಅರ್ಹತೆ ಗುರುತಿಸಲು ಬಾಕಿ ಇರುವ 13,334 ರೈತರ ಪೈಕಿ ರೈತರು ಸಲ್ಲಿಸಿದ ದಾಖಲೆಗಳು ಸರಿ ಇರುವ 4,113 ರೈತರಿಗೆ ಸಂಬಂಧಿಸಿದಂತೆ ಕುಟುಂಬಕ್ಕೆ ರೂ.1.00 ಲಕ್ಷ ಮತ್ತು ಎರಡು ಸಹಕಾರ ಸಂಘಗಳಲ್ಲಿ ಸಾಲ ಪಡೆದಿರುವುದನ್ನು ಸಾಲ ಮನ್ನಾ ವಿಶೇಷ ಕೋಶ, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿ ಪರಿಶೀಲನೆಯಲ್ಲಿದ್ದು, ಶೀಘ್ರದಲ್ಲಿ ಅರ್ಹತೆ ಗುರುತಿಸಲಾಗುವುದು.<br><br>ಉಳಿದ 9,221 ರೈತರಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳು ತಪ್ಪಾಗಿ ಅಳವಡಿಸಿರುವ ಕಾಲಂ 52 ರ ಮಾಹಿತಿಯನ್ನು ಸರಿಪಡಿಸಲು ಅವಕಾಶ ಕಲ್ಪಿಸಲು ಮತ್ತು ರೈತರು ನೀಡಿದ ಪಡಿತರ ಚೀಟಿಗಳು ತಂತ್ರಾಂಶಕ್ಕೆ ಎಂಟ್ರಿ ಮಾಡುವ ಸಂದರ್ಭದಲ್ಲಿ ಸರಿ ಇದ್ದು, ನಂತರದಲ್ಲಿ ಸಣ್ಣ ಪುಟ್ಟ ಬದಲಾವಣೆ ಮಾಡಿದ್ದಲ್ಲಿ ಅಂತಹವುಗಳನ್ನು ಪರಿಗಣಿಸಲು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯವರಿಗೆ ಸಹಕಾರ ಸಂಘಗಳ ನಿಬಂಧಕರಿಂದ ಪತ್ರ ಬರೆಯಲಾಗಿದ್ದು, ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯವರು ಈ ಬಗ್ಗೆ ಸೂಕ್ತ ಕ್ರಮಕೈಗೊಂಡು ಹಸಿರು ಪಟ್ಟಿ ನೀಡಿದ ಕೂಡಲೇ ಬಾಕಿ ಇರುವ ರೈತರ ಸಾಲ ಮನ್ನಾ ಮಾಡಲಾಗುವುದು.</td></tr>
<tr><td>(ಉ)</td><td>ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಇದುವರೆಗೂ ಫಲಾನುಭವಿಗಳಿಗೆ ಬಾಕಿ ಪಾವತಿಸುವಲ್ಲಿ ವಿಳಂಭಕ್ಕೆ ಕಾರಣಗಳೇನು; (ಪೂರ್ಣ ಮಾಹಿತಿ ನೀಡುವುದು)</td><td>ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಇನ್ನೂ 128 ರೈತರ ಅರ್ಹತೆ ಗುರುತಿಸಲು ಬಾಕಿ ಇದ್ದು, ಅರ್ಹತೆ ಗುರುತಿಸಲು ಬಾಕಿ ಇರುವ ಕಾರಣಗಳು ಈ ಕೆಳಗಿನಂತಿರುತ್ತವೆ.
<table>
<tr><th>ಕ್ರ ಸಂ</th><th colspan="2">ಸಾಲ ಮನ್ನಾ ಅರ್ಹತೆ ಗುರುತಿಸದೇ ಇರಲು ಕಾರಣಗಳು</th><th>ಪ್ರಕರಣಗಳ ಸಂಖ್ಯೆ</th></tr>
<tr><td>1</td><td colspan="2">ರೈತರ ದಾಖಲೆಗಳು ಸರಿ ಇದ್ದು ಸಾಲ ಮನ್ನಾ ವಿಶೇಷ ಕೋಶದಿಂದ ಹಸಿರು ಪಟ್ಟಿ ನೀಡಲು ಬಾಕಿ ಇರುವ ಪ್ರಕರಣಗಳು</td><td>30</td></tr>
<tr><td>2</td><td rowspan="2">ಲಾಗಿನ್‌ನಲ್ಲಿ ರೈತರ ಸಾಲದ</td><td rowspan="2">Fraud/type of loan ತಪ್ಪಾಗಿ ಅಳವಡಿಸಿರುವುದು</td><td rowspan="2">1</td></tr>
<tr><td>3</td></tr>
</table></td></tr>
</table>

| | | | | | |
|---|---|---|---|---|---|
| | | 4 | ಮಾಹಿತಿ ತಪ್ಪಾಗಿರುವುದು | ಸುಸ್ತಿ ಸಾಲಗಳಿಗೆ ಬಡ್ಡಿ ಪಾವತಿಯನ್ನು ಸರ್ಕಾರದ ಆದೇಶದ ನಿಗದಿತ ದಿನಾಂಕಕ್ಕೆ ತಾಳೆಯಾಗದೇ ಇರುವುದು | 23 |
| | | 5 | ಸ್ವಯಂ ದೃಢೀಕರಣ ಲಾಗಿನ್‌ಲ್ಲಿನ ರೈತರ ಮಾಹಿತಿಗಳು ತಪ್ಪಾಗಿರುವುದು | ಎರಡು ಸಂಘದಲ್ಲಿ ಅಥವಾ ಖಾತೆಗಳಲ್ಲಿ ಆಧಾರ್ ಕಾರ್ಡ್ ಸಂಖ್ಯೆ ಎರಡು ಬಾರಿ ಇದ್ದು, ಒಂದು ಖಾತೆಗೆ ಸಾಲ ಮನ್ನಾ ನೀಡಲಾಗಿದ್ದು, ಉಳಿದ ಖಾತೆಯನ್ನು ಸಹಕಾರ ಸಂಘಗಳು ರಿಜೆಕ್ಟ್ ಮಾಡದೇ ಇರುವ ಪ್ರಕರಣಗಳು | 44 |
| | | 6 | | | |
| | | 7 | | ರೈತರ ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ಆರ್‌ಟಿಸಿ ಸಂಬಂಧಿಸಿದ ಇಲಾಖೆಯ ದತ್ತಾಂಶದಲ್ಲಿ ಇಲ್ಲದೇ ಇರುವುದು ಅಂದರೆ ಅತೆಂಟಿಕೇಟ್ ಆಗದೇ ಇರುವುದು. | 3 |
| | | 8 | | ರೈತರು ನೀಡಿದ ಪಡಿತರ ಚೀಟಿಗಳು ಆಹಾರ ಮತ್ತು ನಾಗರೀಕ ಸರಬಾರಜು ಇಲಾಖೆಯಿಂದ ಸರಿ ಇರುವ ಬಗ್ಗೆ ದೃಢೀಕರಣ ನೀಡದೇ ಇರುವುದು | 27 |
| | | | **ಒಟ್ಟು** | | **128** |
| (ಊ) | ಸದರಿ ಸಂಘದ ಫಲಾನುಭವಿಗಳಿಗೆ ಯಾವ ಕಾಲಮಿತಿಯಲ್ಲಿ ಬಾಕಿಯನ್ನು ಪಾವತಿಸಲಾಗುವುದು? | ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಅರ್ಹತೆ ಗುರುತಿಸಲು ಬಾಕಿ ಇರುವ 128 ರೈತರ ಪೈಕಿ ರೈತರು ಸಲ್ಲಿಸಿದ ದಾಖಲೆಗಳು ಸರಿ ಇರುವ 30 ರೈತರಿಗೆ ಸಂಬಂಧಿಸಿದಂತೆ ಕುಟುಂಬಕ್ಕೆ ರೂ.1.00 ಲಕ್ಷ ಮತ್ತು ಎರಡು ಸಹಕಾರ ಸಂಘಗಳಲ್ಲಿ ಸಾಲ ಪಡೆದಿರುವುದನ್ನು ಸಾಲ ಮನ್ನಾ ವಿಶೇಷ ಕೋಶ, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿ ಪರಿಶೀಲನೆಯಲ್ಲಿದ್ದು, ಶೀಘ್ರದಲ್ಲಿ ಅರ್ಹತೆ ಗುರುತಿಸಲಾಗುವುದು. | | | |

| | | |
|---|---|---|
| | | ಉಳಿದ 98 ರೈತರಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳು ತಪ್ಪಾಗಿ ಅಳವಡಿಸಿರುವ ಕಾಲಂ 52 ರ ಮಾಹಿತಿಯನ್ನು ಸರಿಪಡಿಸಲು ಅವಕಾಶ ಕಲ್ಪಿಸಲು ಮತ್ತು ರೈತರು ನೀಡಿದ ಪಡಿತರ ಚೀಟಿಗಳು ತಂತ್ರಾಂಶಕ್ಕೆ ಎಂಟ್ರಿ ಮಾಡುವ ಸಂದರ್ಭದಲ್ಲಿ ಸರಿ ಇದ್ದು, ನಂತರದಲ್ಲಿ ಸಣ್ಣ ಮಟ್ಟ ಬದಲಾವಣೆ ಮಾಡಿದ್ದಲ್ಲಿ ಅಂತಹವುಗಳನ್ನು ಪರಿಗಣಿಸಲು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯವರಿಗೆ ಸಹಕಾರ ಸಂಘಗಳ ನಿಬಂಧಕರಿಂದ ಪತ್ರ ಬರೆಯಲಾಗಿದ್ದು, ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯವರು ಈ ಬಗ್ಗೆ ಸೂಕ್ತ ಕ್ರಮಕೈಗೊಂಡು ಹಸಿರು ಪಟ್ಟಿ ನೀಡಿದ ಕೂಡಲೇ ಬಾಕಿ ಇರುವ ರೈತರ ಸಾಲ ಮನ್ನಾ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ, ನಂತರ ಸಾಲ ಮನ್ನಾ ಮೊತ್ತ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು. |

**ಸಂಖ್ಯೆ: ಸಿಒ 147 ಸಿಎಲ್‌ಎಸ್ 2022**

(ಎಸ್.ಟಿ. ಸೋಮಶೇಖರ್)

**ಸಹಕಾರ ಸಚಿವರು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ2832 ಕ್ಕೆ ಅನುಬಂಧ**

ಸಹಕಾರ ಸಂಘಗಳಲ್ಲಿನ ರೂ.1.00 ಲಕ್ಷಗಳ ಬೆಳೆ ಸಾಲ ಮನ್ನಾ ಯೋಜನೆಯಡಿಯಲ್ಲಿ ಅರ್ಹತೆ ಗುರುತಿಸಿದ ಮತ್ತು ಅರ್ಹತೆ ಗುರುತಿಸಲು ಬಾಕಿ ಇರುವ ರೈತರ ವಿವರ

| ಕ್ರ. ಸಂ | ಜಿಲ್ಲೆಯ ಹೆಸರು | ಎಲ್ಲಾ ಷರತ್ತುಗಳನ್ನು ಪೂರೈಸಿ ಅರ್ಹತೆ ಗುರುತಿಸಿದ ರೈತರ ಸಂಖ್ಯೆ | ಅರ್ಹತೆ ಗುರುತಿಸಲು ಭಾಕಿ ಇರುವ ರೈತರ ಸಂಖ್ಯೆ | ಅರ್ಹತೆ ಗುರುತಿಸಿದ ರೈತರ ಪೈಕಿ ಅನುದಾನ ಬಿಡುಗಡೆ ಮಾಡಿದ ರೈತರ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 132324 | 1253 | 129856 |
| 2 | ಬೆಂಗಳೂರು ಗ್ರಾ. | 16919 | 35 | 16830 |
| 3 | ಬೆಂಗಳೂರು ನಗರ | 7745 | 124 | 7695 |
| 4 | ಬೆಳಗಾವಿ | 269366 | 1461 | 265690 |
| 5 | ಬಳ್ಳಾರಿ | 64184 | 116 | 62797 |
| 6 | ಬೀದರ್ | 103583 | 500 | 101882 |
| 7 | ವಿಜಯಪುರ | 152176 | 946 | 148831 |
| 8 | ಚಾಮರಾಜನಗರ | 16756 | 516 | 16421 |
| 9 | ಚಿಕ್ಕಬಳ್ಳಾಪುರ | 11156 | 8 | 11113 |
| 10 | ಚಿಕ್ಕಮಗಳೂರು | 26457 | 109 | 26192 |
| 11 | ಚಿತ್ರದುರ್ಗ | 35135 | 33 | 34909 |
| 12 | ದಕ್ಷಿಣ ಕನ್ನಡ | 60122 | 763 | 58380 |
| 13 | ದಾವಣಗೆರೆ | 61759 | 599 | 60457 |
| 14 | ಧಾರವಾಡ | 13837 | 50 | 13743 |
| 15 | ಗದಗ | 16253 | 237 | 16055 |
| 16 | ಕಲಬುರಗಿ | 42974 | 1226 | 41043 |
| 17 | ಹಾಸನ | 115224 | 102 | 114019 |
| 18 | ಹಾವೇರಿ | 21000 | 75 | 20852 |
| 19 | ಕೊಡಗು | 28495 | 540 | 27995 |
| 20 | ಕೋಲಾರ | 9942 | 15 | 9783 |
| 21 | ಕೊಪ್ಪಳ | 22592 | 14 | 22313 |
| 22 | ಮಂಡ್ಯ | 108096 | 670 | 105945 |
| 23 | ಮೈಸೂರು | 50686 | 663 | 49430 |
| 24 | ರಾಯಚೂರು | 48625 | 304 | 47600 |
| 25 | ರಾಮನಗರ | 36785 | 76 | 36358 |
| 26 | ಶಿವಮೊಗ್ಗ | 31870 | 348 | 31416 |
| 27 | ತುಮಕೂರು | 118652 | 1362 | 116401 |
| 28 | ಉಡುಪಿ | 21749 | 304 | 21149 |
| 29 | ಉತ್ತರ ಕನ್ನಡ | 80326 | 733 | 79146 |
| 30 | ಯಾದಗಿರಿ | 12264 | 152 | 11748 |
| | ಒಟ್ಟು | 17,37,052 | 13,334 | 17,06,049 |